ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ವೆಸ್ಟ್ಆಫ್ ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು– 560 010.

ಸಂಖ್ಯೆ:ಕರಾಸಕೈಅನಿನಿ/ಸಿಬ್ಬಂದಿ/ಗುತ್ತಿಗೆ/2024-26 /736 ದಿನಾಂಕ: 2 AUG 2024

## ಹೊರಸಂಪನ್ಮೂಲ ಆಧಾರಿತ ಸಿಬ್ಬಂದಿ ಸೇವೆ ಒದಗಿಸುವ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಎಸ್.ಐ.ಡಿ.ಸಿ.)ಕ್ಕೆ ಎರಡು ವರ್ಷದ ಅವಧಿಗೆ ಹೊರಸಂಪನ್ಮೂಲ ಆಧಾರಿತ ಕಛೇರಿ/ಭದ್ರತಾ ಸಿಬ್ಬಂದಿ ಸೇವೆ ಒದಗಿಸಲು ಟೆಂಡರ್ ಡಾಕ್ಯುಮೆಂಟ್.

ವ್ಯವಸ್ಥಾಪಕ ನಿರ್ದೇಶಕರು

15

ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು – 560 010.

ಇವರಿಗೆ:

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ,
ಕೈಗಾರಿಕಾ ವಸಾಹತು, ರಾಜಾಜಿನಗರ,
ಬೆಂಗಳೂರು– 560 010.

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕಛೇರಿಗೆ ಅಗತ್ಯವಿರುವ ಹೊರಸಂಪನ್ಮೂಲ ಆಧಾರಿತ ಕಛೇರಿ / ಭದ್ರತಾ ಸಿಬ್ಬಂದಿ ಸೇವೆಯನ್ನು ಒದಗಿಸುವ ಬಗ್ಗೆ.

------

**ಟೆಂಡರ್ ಫಾರಂ ಭಾಗ –ಎ (ತಾಂತ್ರಿಕ ಬಿಡ್)**

| | | | |
|---|---|---|---|
| 1 | ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ | : | |
| 2 | ಟೆಂಡರ್‌ದಾರರ ಹೆಸರು ಮತ್ತು ವಿಳಾಸ | : | |
| 3 | ಟೆಂಡರ್‌ದಾರರು ವ್ಯಕ್ತಿಯೇ? ಅಥವಾ ಸಂಸ್ಥೆಯೇ? ಸಂಸ್ಥೆಯಾಗಿದ್ದಲ್ಲಿ ನೋಂದಣಿ ವಿವರಗಳು ಹಾಗೂ ಅದರ ಪ್ರತಿಗಳನ್ನು ಲಗತ್ತಿಸಬೇಕು. | : | |
| 4 | ಟೆಂಡರ್ ಫಾರಂ ಶುಲ್ಕ ಪಾವತಿಸಿದ ಬಗ್ಗೆ ವಿವರಗಳು | : | |
| 5 | ಇ.ಎಂ.ಡಿ. ಮೊತ್ತ ಹಾಗೂ ಡಿ.ಡಿ. ವಿವರಗಳು | : | ರೂ.<br>ಡಿ.ಡಿ. ಸಂಖ್ಯೆ<br>ಮತ್ತು ಬ್ಯಾಂಕ್<br><br>ದಿನಾಂಕ: |
| 6 | ಕಾರ್ಮಿಕ ಇಲಾಖೆಯಲ್ಲಿ ನೋಂದಣಿಯಾದ ಬಗ್ಗೆ ವಿವರಗಳು (ನೋಂದಣಿ ಪತ್ರದ ಪ್ರತಿ ಲಗತ್ತಿಸಬೇಕು) | : | |

| | | | |
|---|---|---|---|
| 7 | ಖಾಸಗಿ ಭದ್ರತಾ ಏಜೆನ್ಸಿ ನಡೆಸುವ ಸಂಬಂಧ ಪೊಲೀಸ್ ಇಲಾಖೆಯಿಂದ ಪಡೆದ ಲೈಸನ್ಸ್ ವಿವರ | : | |
| 8 | ಜಿ.ಎಸ್.ಟಿ. ನೋಂದಣಿ ವಿವರಗಳು (ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು) | : | |
| 9 | ಇ.ಪಿ.ಎಫ್. ಕಾಯ್ದೆ ಅಡಿಯಲ್ಲಿ ಪಡೆದಿರುವ ಕೋಡ್ ಸಂಖ್ಯೆ ವಿವರ (ಪ್ರತಿ ಲಗತ್ತಿಸುವುದು.) | : | |
| 10 | ಇ.ಎಸ್.ಐ. ಕಾಯ್ದೆ ಅಡಿಯಲ್ಲಿ ಪಡೆದಿರುವ ಕೋಡ್ ಸಂಖ್ಯೆ ವಿವರ (ಪ್ರತಿ ಲಗತ್ತಿಸುವುದು) | : | |
| 11 | ವೃತ್ತಿ ತೆರಿಗೆ ನೋಂದಣಿ ವಿವರಗಳು<br>(ಪ್ರಮಾಣ ಪತ್ರ ಲಗತ್ತಿಸಿರಬೇಕು) | | |
| 12 | ಪಾನ್ ಕಾರ್ಡ್ ವಿವರಗಳು (ಪ್ರತಿ ಲಗತ್ತಿಸಬೇಕು) ಹಾಗೂ ಕಳೆದ ಮೂರು ವರ್ಷ ಆದಾಯ ತೆರಿಗೆ ಮತ್ತು ಸೇವಾ ತೆರಿಗೆ ರಿರ್ಟನ್ಸ್ ಫೈಲ್ ಮಾಡಿದ ವಿವರಗಳು | : | |
| 13 | ಕಳೆದ 3 ವರ್ಷಗಳಲ್ಲಿ ವಿವಿಧ ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಗಳಿಗೆ ಹೊರ ಸಂಪನ್ಮೂಲ ಆಧಾರಿತ ಸೇವೆ ಒದಗಿಸಿದ ಬಗ್ಗೆ ವಿವರಗಳು, ಸಿಬ್ಬಂದಿಗೆ ಯಾವುದೇ ರೀತಿಯ ವಿಮೆ ಹಾಗೂ ಸಾಮಾಜಿಕ ಭದ್ರತೆಗೆ ಒದಗಿಸಿದ ವಿವರಗಳು (ದೃಢೀಕರಣ ಪತ್ರ ಲಗತ್ತಿಸಬೇಕು) | : | |
| 14 | ಕಳೆದ 3 ವರ್ಷಗಳಲ್ಲಿ ಟೆಂಡರ್‌ದಾರರು ಹೊರ ಸಂಪನ್ಮೂಲ ಆಧಾರಿತ ಸೇವೆ ಒದಗಿಸಿದ ಸಂಬಂಧ ವಾರ್ಷಿಕ ವಹಿವಾಟುಗಳ ವಿವರಗಳು.<br>(ಆಡಿಟ್ ವರದಿಯ ಪ್ರತಿಗಳನ್ನು ಲಗತ್ತಿಸಬೇಕು.) | : | |
| 15 | ಚಾಲ್ತಿ ವರ್ಷದಲ್ಲಿ ಟೆಂಡರ್‌ದಾರರು ಬೇರೆ ಬೇರೆ ಸರ್ಕಾರಿ / ಅರೆ ಸರ್ಕಾರಿ ಸಂಸ್ಥೆಗಳಿಗೆ ಹೊರ ಸಂಪನ್ಮೂಲ ಸೇವೆ ಒದಗಿಸುತ್ತಿರುವ ಬಗ್ಗೆ ವಿವರಗಳು. ಯಾವ ಯಾವ ಸಂಸ್ಥೆಗಳಿಗೆ ಎಷ್ಟು ಸಿಬ್ಬಂದಿ ರಾಜ್ಯ / ಕೇಂದ್ರ ಸರ್ಕಾರಗಳ ಸಂಸ್ಥೆಗಳಿಗೆ / ಉದ್ಯಮಗಳಿಗೆ ಒದಗಿಸಲಾಗಿದೆ ಎಂಬ ಬಗ್ಗೆ ವಿವರಗಳು (ಸಂಸ್ಥೆಗಳ ಕಾರ್ಯಾದೇಶ ಪ್ರತಿಗಳನ್ನು ಲಗತ್ತಿಸಬೇಕು.) | : | |
| 16 | ಈ ಹಿಂದೆ ಸೇವೆ ಒದಗಿಸಿದ ಸಂಸ್ಥೆಗಳಿಂದ ಯಶಸ್ವಿಯಾಗಿ ಮತ್ತು ತೃಪ್ತಿಕರವಾಗಿ ಸೇವೆ ಒದಗಿಸಿದ್ದಾರೆಂಬ ಬಗ್ಗೆ ಸೇವಾ ದೃಢೀಕರಣ ಪತ್ರಗಳನ್ನು ಲಗತ್ತಿಸುವುದು. | : | |
| 17 | ಕರ್ನಾಟಕದಾದ್ಯಂತ ಪ್ರತ್ಯೇಕ ಏಜೆನ್ಸಿ ವ್ಯವಹಾರವನ್ನು ನಡೆಸಲು ಆರಕ್ಷಕ ಇಲಾಖೆಯಿಂದ ಪಡೆದ ಪರವಾನಗಿ ಪತ್ರದ ದೃಢೀಕೃತ ಪ್ರತಿ ಲಗತ್ತಿಸುವುದು. | | |
| 18 | ಇತರೆ ದಾಖಲೆಗಳು ಇದ್ದಲ್ಲಿ ಸಲ್ಲಿಸುವುದು. | : | |

ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಿ ಮೇಲ್ಕಂಡಂತೆ ನೀಡಿರುವ ಎಲ್ಲಾ ಮಾಹಿತಿಯು ಸರಿ ಇದೆ ಎಂದು ದೃಢೀಕರಿಸಿ, ಈ ಮೇಲಿನಂತೆ ದೃಢೀಕೃತ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ಟೆಂಡರ್‌ದಾರರ ಸಹಿ, ಹೆಸರು
ಮತ್ತು ಮೊಹರು

13

ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು– 560 010.

ಇವರಿಗೆ:

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ,
ಕೈಗಾರಿಕಾ ವಸಾಹತು, ರಾಜಾಜಿನಗರ,
ಬೆಂಗಳೂರು– 560 010.

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕಛೇರಿಗೆ ಅಗತ್ಯವಿರುವ ಹೊರಸಂಪನ್ಮೂಲ ಆಧಾರಿತ ಕಛೇರಿ ಸಿಬ್ಬಂದಿ / ಭದ್ರತಾ ಸಿಬ್ಬಂದಿ ಸೇವೆಯನ್ನು ಒದಗಿಸುವ ಬಗ್ಗೆ.

------------

**ಟೆಂಡರ್ ಫಾರಂ ಭಾಗ –ಬಿ (ಆರ್ಥಿಕ ಬಿಡ್)**

| | |
|---|---|
| ಟೆಂಡರ್ ಪ್ರಕಟಣೆಯಲ್ಲಿರುವ ಹುದ್ದೆಗಳಿಗೆ ಟೆಂಡರ್‌ದಾರರು ಮಾನವ ಸೇವೆ ಒದಗಿಸುವ ಪ್ರತಿ ನೌಕರರ ಒಟ್ಟು ವೇತನಕ್ಕೆ (ನೌಕರರ ವೇತನ ಹಾಗೂ ನೌಕರರಿಗೆ ನೀಡುವ ವಂತಿಕೆಗಳ ಮೊಬಲಗಿಗೆ ಮಾತ್ರ ಪರಿಗಣಿಸಬೇಕೆ ಹೊರತು ಇದರ ಲೆಕ್ಕಾಚಾರದ ಮೇಲಿನ ಜಿ.ಎಸ್.ಟಿ.ಗೆ ಸೇರಿಸುವಂತಿಲ್ಲ.) ಶೇಕಡವಾರು ಪಡೆಯುವ ಜಿ.ಎಸ್.ಟಿ.ಯನ್ನು (G.S.T.), ಶೇಕಡವಾರು (percentage) ದರದಲ್ಲಿ ನಮೂದಿಸಬೇಕು ಹಾಗೂ ಸೇವಾ ಶುಲ್ಕವನ್ನು 0% ನಮೂದಿಸಿದಲ್ಲಿ ತಿರಸ್ಕರಿಸಲಾಗುವುದು | ಸೇವಾ ಶುಲ್ಕ ಶೇಕಡವಾರು ದರ ----------% <br> ಅಕ್ಷರಗಳಲ್ಲಿ------------------------- <br> ---------------------------------- <br> ------------------------------ |

ಟೆಂಡರ್‌ದಾರರ ಸಹಿ, ಹೆಸರು
ಮತ್ತು ಮೊಹರು

ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು- 560 010.

******

ಭಾಗ (ಅ) ಟೆಂಡರ್ ಆಹ್ವಾನಿಸಲಾದ ನೋಟೀಸ್
ಭಾಗ (ಆ) ಷರತ್ತು ಮತ್ತು ನಿಬಂಧನೆಗಳು
ಭಾಗ (ಇ) ಟೆಂಡರ್ ಸಲ್ಲಿಸಬೇಕಾದ ವಿಧಾನ

**ಟಿಪ್ಪಣಿ :** ಟೆಂಡರ್‌ದಾರರು ಟೆಂಡರು ಸಲ್ಲಿಸುವ ಪೂರ್ವದಲ್ಲಿ ಭಾಗ – 'ಅ' ದಿಂದ 'ಇ' ರವರೆಗೆ ಸರಿಯಾಗಿ ಓದಿಕೊಂಡು ಭರ್ತಿ ಮಾಡತಕ್ಕದ್ದು. ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿಗಳು ಮತ್ತು ಲೋಪದೋಷಗಳಿದ್ದಲ್ಲಿ ಯಾವುದೇ ಕಾರಣ ನೀಡದೆ ಟೆಂಡರನ್ನು ತಿರಸ್ಕರಿಸಲಾಗುವುದು.

ವ್ಯವಸ್ಥಾಪಕ ನಿರ್ದೇಶಕರು

ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು– 560 010.

ಸಂಖ್ಯೆ: ಕರಾಸಕೈಅನಿನಿ/ಸಿಬ್ಬಂದಿ/ಗುತ್ತಿಗೆ/2024–26 / 736 ದಿನಾಂಕ: - 2 AUG 2024

**ಭಾಗ–ಅ**

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ವಿವಿಧ ಕಛೇರಿಗಳಿಗೆ ಅಗತ್ಯವಿರುವ ಭದ್ರತಾ / ಕಛೇರಿ ಸಿಬ್ಬಂದಿ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಏಜೆನ್ಸಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಪ್ರಧಾನ ವ್ಯವಸ್ಥಾಪಕರು(ಆಡಳಿತ/ಭೂಸ್ವಾಧೀನ) ಕರಾಸಕೈಅನಿನಿ, ಬೆಂಗಳೂರು–560 010, ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

1. *ಟೆಂಡರ್ ಕುರಿತು* ***Online Queries in eportal*** *ದಿನಾಂಕ 09.08.2024 ಸಂಜೆ 4.00 ಗಂಟೆ ವರೆಗೆ*
2. *ಪ್ರಿ–ಬಿಡ್ ಮೀಟಿಂಗ್ ದಿನಾಂಕ 12.08.2024 ಬೆಳಿಗ್ಗೆ 11.30 ಗಂಟೆಗೆ*
3. *ಇ–ಪೋರ್ಟಲ್ ಮುಖಾಂತರ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 21.08.2024 ಸಂಜೆ 5.30 ಗಂಟೆಯವರೆಗೆ.*
4. *ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ 23.08.2024 ಬೆಳಿಗ್ಗೆ 11.00 ಗಂಟೆಗೆ.*
5. *ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ 28.08.2024 (ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ)*

ದಿನಾಂಕ 06.08.2024 ಸಂಜೆ 4.00 ಗಂಟೆಯ ನಂತರ ಕ್ಕೆ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. (ಕೆ.ಎಸ್.ಎಸ್.ಐ.ಡಿ.ಸಿ.) ಕರ್ನಾಟಕ ಸರ್ಕಾರದ 'ಇ' ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/eportal/index.seam

1) ಟೆಂಡರ್ ದಸ್ತಾವೇಜು ಶುಲ್ಕ ಜಿ.ಎಸ್.ಟಿ. ಒಳಗೊಂಡಂತೆ ರೂ.590/–(ರೂಪಾಯಿ ಐದು ನೂರ ತ್ತೊಂಬತ್ತು ಮತ್ತು ಮುಂಗಡ ಠೇವಣಿ ಹಣ ರೂ.3,00,000/–(ರೂಪಾಯಿ ಮೂರು ಲಕ್ಷ ಮಾತ್ರ)ಗಳನ್ನು ಪೋರ್ಟಲ್‌ನಲ್ಲಿ ಒದಗಿಸಿರುವ ಆನ್‌ಲೈನ್ ಪಾವತಿ ಮುಖೇನ ಪ್ರತ್ಯೇಕವಾಗಿ ಟೆಂಡರ್ ಮುಕ್ತಾಯದ ದಿನಾಂಕಗಳೊಳಗಾಗಿ ಸಂದಾಯ ಮಾಡಬೇಕು.

2) ಈ ಕೆಳಗಿನ ಯಾವುದಾದರು ವಿಧಾನದಲ್ಲಿ ಪಾವತಿ ಮಾಡುವುದು.

**ಆನ್‌ಲೈನ್ ಪಾವತಿಗಳು:**

I. ಕ್ರೆಡಿಟ್ ಕಾರ್ಡ್ – ವಿಸಾ ಅಥವಾ ಮಾಸ್ಟರ್ ಕಾರ್ಡ್ (ಯಾವುದೇ ಬ್ಯಾಂಕ್)
II. ಡೆಬಿಟ್ ಕಾರ್ಡ್ – ವಿಸಾ, ಮಾಸ್ಟರ್ ಅಥವಾ ಮಾಸ್ಟರ್ ಕಾರ್ಡ್ (ಯಾವುದೇ ಬ್ಯಾಂಕ್)
III. ನೆಟ್ ಬ್ಯಾಂಕಿಂಗ್ – ಆಯ್ಕೆ ಮಾಡಿಕೊಂಡಿರುವ ಬ್ಯಾಂಕ್‌ಗಳು ಮಾತ್ರ

## ಆಫ್‌ಲೈನ್ ಪಾವತಿಗಳು:

1. ಎನ್‌ಇಎಫ್‌ಟಿ/ಆರ್‌ಟಿಜಿಎಸ್ – (ಯಾವುದೇ ರಾಷ್ಟ್ರೀಕೃತ ಬ್ಯಾಂಕ್)
2. ಬ್ಯಾಂಕ್ ಕೌಂಟರ್‌ನಲ್ಲಿ ಚಲನ್ ಉಪಯೋಗಿಸಿ ಸಂದಾಯ ಮಾಡುವುದು (ಐಸಿಐಸಿಐ ಬ್ಯಾಂಕ್ ಮಾತ್ರ)

**ಟಿಪ್ಪಣಿ:** ಎಲ್ಲಾ ವಿಧಧ ಪಾವತಿಗಳಿಗೂ ಮೇಲಿನ ಅಂಶಗಳನ್ನು ಪರಿಗಣಿಸಲಾಗುವುದು.
ಟೆಂಡರ್ ಪರಿಷ್ಕರಣ ಶುಲ್ಕ, ಗುತ್ತಿಗೆ ನಿರ್ವಹಣೆ, ಕ್ಯಾಟಲಾಗು ನಿರ್ವಹಣೆ, ಇ.ಎಂ.ಡಿ. ಮೊತ್ತ ರೂ.3,00,000/- (ಮುಂಗಡ ಠೇವಣಿ ಹಣ)

3. **<u>ಕರ್ತವ್ಯ ನಿರ್ವಹಿಸಬೇಕಾದ ಸ್ಥಳ:</u>** ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಕೇಂದ್ರ ಕಛೇರಿ, ಬೆಂಗಳೂರು ಹಾಗೂ ರಾಜ್ಯಾದ್ಯಂತ ಇರುವ ನಿಗಮದ ವಲಯ / ವಿಭಾಗೀಯ / ಶಾಖಾ ಕಛೇರಿಗಳು ಹಾಗೂ ನಿಗಮವು ಕಾಲಕಾಲಕ್ಕೆ ಸೂಚಿಸುವ ಕೈಗಾರಿಕಾ ವಸಾಹತು / ಬೇರೆ ಬೇರೆ ಕಛೇರಿಗಳು.

4. ಗುತ್ತಿಗೆ ಅವಧಿಯು ಕೆಲಸದ ಆದೇಶ ನೀಡಿದ ದಿನಾಂಕದಿಂದ 02 ವರ್ಷಗಳ ಅವಧಿಗೆ ಅಥವಾ ಹೊಸದಾಗಿ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸುವವರೆಗೆ ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ ಚಾಲ್ತಿಯಲ್ಲಿ ಇರುತ್ತದೆ. ಗುತ್ತಿಗೆದಾರರು ನಿಗಮವು ನಿಗಧಿಪಡಿಸಿದ ದರಗಳ ಮೇಲೆ ಸೇವಾ ಶುಲ್ಕವನ್ನು ಮಾತ್ರ ನಮೂದಿಸತಕ್ಕದ್ದು. ಸೇವಾ ಶುಲ್ಕವು ಸೊನ್ನೆ ಎಂದು ನಮೂದಿಸಬಾರದು. ಸೊನ್ನೆ ನಮೂದಿಸಿದರೆ ಟೆಂಡರನ್ನು ತಿರಸ್ಕರಿಸಲಾಗುವುದು.
5. ಟೆಂಡರ್‌ದಾರರು ಆದಾಯ ತೆರಿಗೆಯ **PAN, TAN, GST IN** ವೃತ್ತಿ ತೆರಿಗೆ, ಸೇವಾತೆರಿಗೆ ಮತ್ತು ನೊಂದಣಿ ಸಂಖ್ಯೆಗಳನ್ನು ತಪ್ಪದೇ ಟೆಂಡರ್‌ನಲ್ಲಿ ನಮೂದಿಸಿ ಸಂಬಂಧಿಸಿದ ದಾಖಲೆಗಳ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸುವುದು.
6. ನಿಗಮಕ್ಕೆ ಬೇಕಾದ ಸಿಬ್ಬಂದಿ ಸಂಖ್ಯೆಯು ಸಕ್ಷಮ ಪ್ರಾಧಿಕಾರದ ಅನುಮೋದನೆ ಮೇರೆಗೆ ಬದಲಾವಣೆಗೆ ಒಳಪಟ್ಟಿದೆ.
7. **ಆಯ್ಕೆಯಾದ ಟೆಂಡರ್‌ದಾರರು ರೂ.200/- ರ ಛಾಪಾ ಕಾಗದದ ಮೇಲೆ ನಿಗದಿತ ನಮೂನೆಯಲ್ಲಿ 07 ದಿನಗಳೊಳಗೆ ಟೆಂಡರ್ ಅಂಗೀಕರಿಸುವ ಬಗ್ಗೆ ಕರಾರು ಪತ್ರವನ್ನು ಹಾಗೂ ಎರಡು ತಿಂಗಳ ಹೊರ ಸಂಪನ್ಮೂಲದ ಸಿಬ್ಬಂದಿ ವೇತನವನ್ನು performance guarantee deposit ಆಗಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ Bank Guarantee ನೀಡಬೇಕು Bank Guarantee ಅವಧಿಯು ಕೆಲಸದ ಆದೇಶ ದಿನಾಂಕದಿಂದ 30 ತಿಂಗಳ ಅವಧಿಗೆ ನೀಡಬೇಕು.**
8. ಯಾವುದೇ ಕಾರಣವನ್ನು ನೀಡದೆ ಕೆ.ಟಿ.ಪಿ.ಪಿ. ಅಧಿನಿಯಮ 1999 ಪ್ಯಾರ 14 ಮತ್ತು 15 ರಂತೆ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಟೆಂಡರ್ ಆಹ್ವಾನ ಪ್ರಾಧಿಕಾರ ಹೊಂದಿರುತ್ತದೆ.
9. ಟೆಂಡರ್‌ದಾರರು ಟೆಂಡರ್‌ನೊಂದಿಗೆ ಶಾಸನಬದ್ಧ ಪಾವತಿಗಳಾದ ಪಿ.ಎಫ್., ಇ.ಎಸ್.ಐ. ರಿಜಿಸ್ಟ್ರೇಷನ್ ದಾಖಲೆಗಳನ್ನು ಸಲ್ಲಿಸುವುದು.

## ಆಯ್ಕೆಗಾಗಿ ಮಾನದಂಡಗಳು:

ಅ) ಏಜೆನ್ಸಿಯವರು ಎಲ್ಲಾ ಶಾಸನಬದ್ಧ ನೋಂದಣಿಗಳನ್ನು ಹೊಂದಿರತಕ್ಕದ್ದು,
ಆ) ಯಾರು ಅತಿ ಕಡಿಮೆ ಸೇವಾ ಶುಲ್ಕವನ್ನು ನಮೂದಿಸುವರೋ ಅವರನ್ನು ಪರಿಗಣಿಸಲಾಗುವುದು.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು,

ಪ್ರತಿ:

ಉಪ ಕಾರ್ಯದರ್ಶಿ ಹಾಗೂ ಟೆಂಡರ್ ಬುಲೆಟಿನ್ ಅಧಿಕಾರಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, 1ನೇ ಮಹಡಿ, ವಿಕಾಸಸೌಧ, ಬೆಂಗಳೂರು – ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಣೆ ಹೊರಡಿಸಲು ಕೋರಿದೆ.

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ
ಅಭಿವೃದ್ಧಿ ನಿಗಮ ನಿಯಮಿತ,
ಬೆಂಗಳೂರು.

ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು– 560 010.

## ಭಾಗ–ಆ

### ಕಛೇರಿ ಸಿಬ್ಬಂದಿ / ಭದ್ರತಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಂಬಂಧ ಷರತ್ತು ಮತ್ತು ನಿಬಂಧನೆಗಳು

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ಕಂಪನಿ ಕಾಯ್ದೆ 1956 ರ ಪ್ರಕಾರ 1960 ರಲ್ಲಿ ಸ್ಥಾಪನೆಯಾಗಿರುತ್ತದೆ. ಈ ನಿಗಮಕ್ಕೆ ಕಛೇರಿ ಸಿಬ್ಬಂದಿ / ಭದ್ರತಾ ಸಿಬ್ಬಂದಿಗಳನ್ನು ರಾಜ್ಯಾದ್ಯಂತ ಒದಗಿಸುವ ಸಂಸ್ಥೆಯಿಂದ ಟೆಂಡರ್ ಮುಖಾಂತರ ಪಡೆಯಲಾಗುವುದು.

1. ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಕನಿಷ್ಠ ವೇತನ ಕಾಯಿದೆಗಳನ್ವಯ ಕ್ರಮಕೈಗೊಳ್ಳಲು ಬದ್ಧರಾಗಿರುವ ಬಗ್ಗೆ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು ಹಾಗೂ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿಗಳಿಗೆ ಬದ್ದರಾಗಿರತಕ್ಕದ್ದು.
2. ಏಜೆನ್ಸಿಯು ಇಲ್ಲಿಯವರೆಗೆ ಯಾವುದಾದರೂ ಸರ್ಕಾರಿ/ಅರೆಸರ್ಕಾರಿ ಸಂಸ್ಥೆಗೆ ಕನಿಷ್ಠ 100 ಸಿಬ್ಬಂದಿಯನ್ನು ಒದಗಿಸಿರುವ ಬಗ್ಗೆ ಅಗತ್ಯ ದಾಖಲೆಗಳನ್ನು ಲಗತ್ತಿಸತಕ್ಕದ್ದು.
3. ಆಯ್ಕೆಯಾದ ಗುತ್ತಿಗೆದಾರರು ಬೇರೆಯವರಿಗೆ ಕೆಲಸವನ್ನು ಹಸ್ತಾಂತರಿಸುವಂತಿಲ್ಲ (Sublet).
4. ಟೆಂಡರ್ ಸಲ್ಲಿಸುವ ಟೆಂಡರ್‌ದಾರರು ಹಿಂದಿನ ಮೂರು ವರ್ಷಗಳಲ್ಲಿ (2021–22, 2022–23 ಮತ್ತು 2023–24ರ ವರೆಗೆ) ತೃಪ್ತಿಕರವಾಗಿ ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರಿತ ಸಿಬ್ಬಂದಿ ಸೇವೆ ಒದಗಿಸಿದ ಬಗ್ಗೆ ದೃಢೀಕರಣ ಪತ್ರದ ಪ್ರತಿಗಳನ್ನು ಸಲ್ಲಿಸುವುದು.
5. 2021–22, 2022–23 ಮತ್ತು 2023–24ರ 3 ವರ್ಷಗಳ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪ್ರತಿ ಸಾಲಿನಲ್ಲಿ ಕನಿಷ್ಠ ರೂ.50.00 ಲಕ್ಷಗಳ ಬ್ಯಾಂಕ್ ವಹಿವಾಟು ನಡೆಸಿದ ವಿವರಗಳ ಬಗ್ಗೆ ಜಮಾ, ಖರ್ಚಿನ ಪಟ್ಟಿಯನ್ನು ಬ್ಯಾಂಕ್ ಪಾಸ್ ಪುಸ್ತಕದ ಆಧಾರದ ಮೇಲೆ ಚಾರ್ಟರ್ಡ್ ಅಕೌಂಟೆಂಟ್ ರವರು ತಯಾರಿಸಿ ಸಲ್ಲಿಸಿದ ಆಡಿಟ್ ಪ್ರತಿಗಳೊಂದಿಗೆ ಸಲ್ಲಿಸತಕ್ಕದ್ದು ಹಾಗೂ ಈ ಮೂರು ವರ್ಷಗಳ ಅವಧಿಯಲ್ಲಿ ಬ್ಯಾಂಕ್ ವ್ಯವಸ್ಥಾಪಕರಿಂದ ಪ್ರತಿವರ್ಷ ನಡೆಸಿದ ಆರ್ಥಿಕ ವಹಿವಾಟುಗಳ ದೃಢೀಕೃತ ಪ್ರತಿ ವರ್ಷವಾರು ಸಲ್ಲಿಸತಕ್ಕದ್ದು.
6. ಏಜೆನ್ಸಿಯ ಕರಾರು ಕಾರ್ಮಿಕ (ವಿನಿಮಯ ಮತ್ತು ರದ್ಧತಿ) ಅಧಿನಿಯಮ, ಕಾರ್ಮಿಕರ ವಿಮಾ ಅಧಿನಿಯಮ 1948, ನೌಕರರ ಭವಿಷ್ಯ ಅಧಿನಿಯಮ 1952 ಮತ್ತು ಬೋನಸ್ ಸಂದಾಯ ಅಧಿನಿಯಮ, ಉಪಧನ ಸಂದಾಯ ಅಧಿನಿಯಮ ಅನ್ವಯಿಸುವಂತೆ ಇತರೆ ಯಾವುದೇ ಪರಿನಿಯಮಗಳು ಅಧಿನಿಯಮಗಳ ಪಾಲನೆಗೆ ಅನ್ವಯವಾಗಬಹುದಾದ ಮತ್ತು ಕಾಲಕಾಲಕ್ಕೆ ತಿದ್ದುಪಡಿ/ ದಂಡ, ಎಲ್ಲಾ ಶಾಸನಬದ್ದ ದಂಡ, ಎಲ್ಲಾ ಅಗತ್ಯತೆಗಳನ್ನು ಪಾಲಿಸಬೇಕು. ಏಜೆನ್ಸಿಯು ಪರಿನಿಯಮಗಳ ಅಡಿಯಲ್ಲಿ ಅಗತ್ಯ ರಿಜಿಸ್ಟರುಗಳು ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಶಾಸನಬದ್ಧ ಪ್ರಾಧಿಕಾರಗಳು ಒದಗಿಸುವಂತೆ ಕೋರಿದಾಗಲೆಲ್ಲಾ ಅವುಗಳನ್ನು ಒದಗಿಸತಕ್ಕದ್ದು.
7. ಭದ್ರತಾ ಸಿಬ್ಬಂದಿಯು ಆವರಣದಲ್ಲಿ ಪ್ರವೇಶಿಸುವ ಎಲ್ಲಾ ಸರ್ಕಾರಿ ವಾಹನಗಳನ್ನು ತಡೆರಹಿತವಾಗಿ ಪ್ರವೇಶಿಸುವಂತೆ ವ್ಯವಸ್ಥೆ ಮಾಡತಕ್ಕದ್ದು ಹಾಗೂ ಖಾಸಗಿ ವಾಹನಗಳು, ವ್ಯಕ್ತಿಗಳು ಆವರಣ ಪ್ರವೇಶಿಸುವ ಮೊದಲು ಪೂರ್ವಾಪರ ಪರಿಶೀಲಿಸಿದ ನಂತರವೇ ಪ್ರವೇಶಿಸಲು ಅನುಮತಿಸುವುದು ಹಾಗೂ ಎಲ್ಲಾ ಸಂದರ್ಭಗಳಲ್ಲಿ ಸೌಜನ್ಯತೆಯಿಂದ ವರ್ತಿಸತಕ್ಕದ್ದು.

8. ಏಜೆನ್ಸಿಯು ನೇಮಿಸುವ ಸಿಬ್ಬಂದಿಗಳು ನಿಗಮದ ಸಂಬಂಧಿಸಿದ ಅಧಿಕಾರಿಗಳು ವಹಿಸುವ ಕರ್ತವ್ಯಗಳನ್ನು ನಿಷ್ಠೆಯಿಂದ ನಿರ್ವಹಿಸತಕ್ಕದ್ದು ಹಾಗೂ ನಿಗಮದ (ಕೆ.ಎಸ್.ಎಸ್.ಐ.ಡಿ.ಸಿ.) ಸ್ಥಿರ ಮತ್ತು ಚರಾಸ್ಥಿಗಳ ಸಂರಕ್ಷಣೆ ಮಾಡುವುದು ಹಾಗೂ ಅವರಿಗೆ ನೇಮಿಸಲಾದ ಸ್ಥಳದಲ್ಲಿ ನಿಷ್ಠೆಯಿಂದ ಕರ್ತವ್ಯ ನಿರ್ವಹಣೆ ಮಾಡುವುದು.

9. ಏಜೆನ್ಸಿಯು ನೇಮಿಸುವ ಭದ್ರತಾ ಸಿಬ್ಬಂದಿಯು ರಜಾ ದಿನಗಳು ಒಳಗೊಂಡಂತೆ ಪಾಳಿಯೊಂದಕ್ಕೆ 8 ಗಂಟೆಗಳಂತೆ ಮೂರು ಪಾಳಿಗಳಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸತಕ್ಕದ್ದು.

10. ನಿಗಮದಲ್ಲಿ ಕಾರ್ಯಕ್ರಮಗಳು ನಡೆಯುವ ಸಮಯದಲ್ಲಿ ಅವಶ್ಯಕತೆ ಇದ್ದಾಗ ಹೆಚ್ಚಿನ ಭದ್ರತಾ ಸಿಬ್ಬಂದಿ ಒದಗಿಸಲು ಬದ್ಧರಾಗಿರಬೇಕು.

11. ಭದ್ರತಾ ಸಿಬ್ಬಂದಿಯು ನಿಗಮದ ಆಸ್ತಿಗೆ ಧಕ್ಕೆಯಾಗದಂತೆ, ಸ್ಥಿರಾಸ್ತಿಗಳನ್ನು ರಕ್ಷಿಸತಕ್ಕದ್ದು, ನಿಗಮದ ಪಂಪಸೆಟ್, ಬೋರ್‌ವೆಲ್, ಓವರ್ ಹೆಡ್ ಟ್ಯಾಂಕ್, ವಾಹನಗಳು ಇತ್ಯಾದಿ ಯಂತ್ರೋಪಕರಣಗಳನ್ನು ಸುರಕ್ಷಿತವಾಗಿ ಅವರಿಗೆ ವಹಿಸಿದ ಪಾಳಿಯಗಳಲ್ಲಿ ನೋಡಿಕೊಳ್ಳತಕ್ಕದ್ದು.

12. ಭದ್ರತಾ ಸಿಬ್ಬಂದಿಯು ನಿಗಮದ (ಕೆ.ಎಸ್.ಎಸ್.ಐ.ಡಿ.ಸಿ.) ಕರ್ತವ್ಯಗಳಿಗೆ ಸಂಬಂಧಿಸಿದಂತೆ ಭದ್ರತೆಯ ದೃಷ್ಟಿಯಿಂದ ವ್ಯತಿರಿಕ್ತವಾಗಿ ಕಂಡು ಬರುವ ಎಲ್ಲಾ ಬಗೆಯ ಲೋಪದೋಷಗಳನ್ನು ಕೂಡಲೇ ನಿಗಮದ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ವರದಿ ಮಾಡತಕ್ಕದ್ದು.

13. ನಿಗಮದ (ಕೆ.ಎಸ್.ಎಸ್.ಐ.ಡಿ.ಸಿ.) ಆಡಳಿತದ ಹಿತದೃಷ್ಟಿಯಿಂದ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ., ಇವರು ವಹಿಸುವ ಇನ್ನಿತರ ಕಛೇರಿಗೆ ಸಂಬಂಧಪಟ್ಟ ಕರ್ತವ್ಯಗಳನ್ನು ಸಹ ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ವಹಿಸತಕ್ಕದ್ದು.

14. ಭದ್ರತಾ ಸಿಬ್ಬಂದಿಯು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ನಿರ್ಲಕ್ಷ್ಯದಿಂದಾಗಿ ನಿಗಮದ ಆಡಳಿತಕ್ಕೆ/ ಆಸ್ತಿಗೆ ಧಕ್ಕೆ ಉಂಟುಮಾಡಿದ ಸಂದರ್ಭಗಳಲ್ಲಿ ಇದಕ್ಕೆ ಕಾರಣರಾದ ಸಿಬ್ಬಂದಿ ಸೇವೆಯನ್ನು ರದ್ದುಗೊಳಿಸುವುದು ಹಾಗೂ ಬದಲಿ ವ್ಯವಸ್ಥೆ ಮಾಡತಕ್ಕದ್ದು ಹಾಗೂ ಉಂಟಾದ ನಷ್ಟವನ್ನು ಏಜೆನ್ಸಿಯೇ ಭರಿಸತಕ್ಕದ್ದು.

15. ನಿಗಮದ ಸ್ಥಿರ / ಚರ ಆಸ್ತಿಗೆ ಯಾವುದೇ ನಷ್ಟವುಂಟಾದಲ್ಲಿ ನಷ್ಟದ ಮೊತ್ತವನ್ನು ಆಯ್ಕೆಯಾದ ಏಜೆನ್ಸಿಯೇ ಭರ್ತಿ ಮಾಡಿಕೊಡತಕ್ಕದ್ದು. ಇಲ್ಲದಿದ್ದಲ್ಲಿ ಕಾನೂನು ಕ್ರಮಕೈಗೊಂಡು ವಸೂಲಿ ಮಾಡಲಾಗುವುದು.

16. ಗುತ್ತಿಗೆ ಪಡೆದ ಏಜೆನ್ಸಿಯು ಕೆಲಸದ ಆದೇಶ ಪಡೆದ ದಿನಾಂಕದಿಂದ *ಎರಡು ವರ್ಷಗಳ* ಅಂತ್ಯದವರೆಗೆ ಅಥವಾ ಸದರಿ ಕೆಲಸಕ್ಕೆ ಹೊಸದಾಗಿ ಟೆಂಡರ್ ಪ್ರಕ್ರಿಯೆ ಮುಗಿದು ಅದರಂತೆ ಹೊಸದಾಗಿ ಗುತ್ತಿಗೆದಾರರನ್ನು ನೇಮಿಸುವವರೆಗೆ ಯಾವುದು ನಂತರವೋ ಅಲ್ಲಿಯವರೆಗೆ ಚಾಲ್ತಿಯಲ್ಲಿದ್ದು, ಹೊರಗುತ್ತಿಗೆ ಆಧಾರಿತ ಸಿಬ್ಬಂದಿ ಸೇವೆಯನ್ನು ಒದಗಿಸತಕ್ಕದ್ದು. ಹುದ್ದೆಗೆ ತಕ್ಕನಾದ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಒದಗಿಸಬೇಕು.

17. ಹೊರಗುತ್ತಿಗೆ ಅಧಾರಿತ ಸಿಬ್ಬಂದಿ ಸೇವೆ ಒದಗಿಸುವ ಏಜೆನ್ಸಿಯು ತಮ್ಮ ಸಂಸ್ಥೆ ವತಿಯಿಂದ ಒದಗಿಸುವ ಭದ್ರತಾ ಸಿಬ್ಬಂದಿಗೆ ಕಾರ್ಮಿಕ ಇಲಾಖೆಯ ನಿಯಮದಂತೆ ಸೌಲಭ್ಯಗಳನ್ನು ಒದಗಿಸತಕ್ಕದ್ದು.

18. ಏಜೆನ್ಸಿಯು ನೇಮಿಸುವ ಸಿಬ್ಬಂದಿಗಳು, ನಿಗಮದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ಸಂಬಂಧಿಕರಾಗಿರಬಾರದು. ಸಿಬ್ಬಂದಿಯು ದೈಹಿಕವಾಗಿ ಆರೋಗ್ಯವಂತರಾಗಿ ದೃಢಕಾಯರಾಗಿದ್ದು, ಕಾರ್ಮಿಕ ಕಾಯ್ದೆಯಡಿಯಲ್ಲಿ ಸೂಚಿಸಿರುವ ವಯೋಮಿತಿಯಲ್ಲಿ ಇರತಕ್ಕದ್ದು. ಸಿಬ್ಬಂದಿಯು ಯಾವುದೇ ಕ್ರಿಮಿನಲ್ ಪೂರ್ವ ಇತಿಹಾಸ ಹೊಂದಿರಬಾರದು ಹಾಗೂ ಯಾವುದೇ ಅಪರಾಧಗಳಲ್ಲಿ ಭಾಗಿಯಾಗಿರಬಾರದು.

19. ಏಜೆನ್ಸಿಯು ಒಬ್ಬರು ಸೆಕ್ಯೂರಿಟಿ ಮೇಲ್ವಿಚಾರಕರನ್ನು ನೇಮಿಸಿ ಪ್ರತಿ ದಿನ ಕರ್ತವ್ಯ ನಿರತ ಸಿಬ್ಬಂದಿ ಹಾಜರಾತಿ ಮತ್ತು ಅವರ ಕಾರ್ಯದಕ್ಷತೆಯನ್ನು ಮೇಲ್ವಿಚಾರಣೆ ನಡೆಸಿ ನಿಗಮದ ಕಛೇರಿಗೆ ವರದಿ ಮಾಡತಕ್ಕದ್ದು.

20. ಪ್ರತಿ ತಿಂಗಳು ಸಲ್ಲಿಸುವ ಬಿಲ್ಲು ಮತ್ತು ಹಾಜರಾತಿ ಜೊತೆಗೆ ನೌಕರರ ಹೆಸರಿನಲ್ಲಿ ಇಎಸ್‌ಐ, ಇಪಿಎಫ್ ಮತ್ತು ಜಿ.ಎಸ್.ಟಿ. ಸೇವಾತೆರಿಗೆ ಪಾವತಿಸಿದ ಬಗ್ಗೆ ದಾಖಲೆಗಳ ಪ್ರತಿಗಳನ್ನು ಬಿಲ್ಲಿನ ಜೊತೆಯಲ್ಲಿ ಸಲ್ಲಿಸತಕ್ಕದ್ದು. ನಿಗಮದ ಅಧಿಕಾರಿಗಳು ಏಜೆನ್ಸಿಯು ಸಲ್ಲಿಸಿರುವ ಬಿಲ್ಲನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿ ಸಿಬ್ಬಂದಿ ಸೇವೆ ತೃಪ್ತಿಕರವಾಗಿದೆ ಎಂದು ಧೃಡೀಕರಿಸಿದ ನಂತರ ಬಿಲ್ಲನ್ನು ಪಾವತಿಸಲಾಗುವುದು. ಪ್ರತಿ ಭದ್ರತಾ ಸಿಬ್ಬಂದಿಗೆ EPF ನೀಡುವ UAN ಸಂಖ್ಯೆ. ಹಾಗೂ ESI ನೀಡುವ PEHCHAN CARD ಒದಗಿಸತಕ್ಕದ್ದು.

21. ಏಜೆನ್ಸಿಯು ಪ್ರತಿಯೊಬ್ಬ ಸಿಬ್ಬಂದಿಯ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆರೆದು ಪ್ರತಿ ತಿಂಗಳ ವೇತನವನ್ನು ತಮ್ಮ ಸಂಸ್ಥೆಯ ಖಾತೆಯಿಂದ ನೇರವಾಗಿ RTGS/NEFT ಮುಖಾಂತರ ಸಂಬಳದ ಹಣವನ್ನು ವರ್ಗಾಯಿಸಬೇಕು. ಈ ಪ್ರತಿಯನ್ನು ಪ್ರತಿ ತಿಂಗಳು ಸಲ್ಲಿಸುವ ಬಿಲ್ಲಿನ ಜೊತೆಯಲ್ಲಿ ಸಲ್ಲಿಸಬೇಕು. ಪ್ರತಿ ಸಿಬ್ಬಂದಿಗೆ ಪ್ರತಿ ತಿಂಗಳ salary slip (salary slip ನಲ್ಲಿ Gross Salary, EPF, ESI et., deductions & net salary) ನೀಡಿ ಅದರ ಪ್ರತಿ ಬಿಲ್‌ನೊಂದಿಗೆ ಸಲ್ಲಿಸತಕ್ಕದ್ದು.

22. ಪ್ರತಿಯೊಬ್ಬ ನೌಕರನಿಗೂ ಮನೆಗೆ ತೆಗೆದುಕೊಂಡು ಹೋಗುವ ವೇತನವನ್ನು (Take Home Salary) ನಿಗದಿಪಡಿಸಿರುವಂತೆ ಪ್ರತಿ ತಿಂಗಳ 5ನೇ ತಾರೀಕಿನ ಒಳಗೆ ಕಡ್ಡಾಯವಾಗಿ ಸಿಬ್ಬಂದಿಯ ಬ್ಯಾಂಕ್ ಉಳಿತಾಯ ಖಾತೆಗೆ ಪಾವತಿಸಬೇಕು. ಉಳಿದಂತೆ ಕಟಾವು ಮಾಡಿದ ಹಣವನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಿಬ್ಬಂದಿಗಳ ಲೆಕ್ಕಕ್ಕೆ ಸಕಾಲದಲ್ಲಿ ಸಂದಾಯ ಮಾಡಬೇಕು. ಸಿಬ್ಬಂದಿಗೆ ಕರಾರಿನ ಪ್ರಕಾರ ಮಾಸಿಕ ವೇತನದ ಮೊತ್ತವನ್ನು ಹೊರತುಪಡಿಸಿದಂತೆ ನಿಗಮದಿಂದ ಬೇರಾವುದೇ ಪರಿಹಾರ ಅಥವಾ ಭತ್ಯೆಗಳನ್ನು ನೀಡಲಾಗುವುದಿಲ್ಲ.

23. ಸಿಬ್ಬಂದಿಯ ವೇತನ ಮತ್ತು ಇತರೆ ಕಡಿತಗಳನ್ನು ಪೂರ್ವಭಾವಿಯಾಗಿ ಕನಿಷ್ಠ 2 ಅಥವಾ 3 ತಿಂಗಳ ಸಿಬ್ಬಂದಿಯ ವೇತನವನ್ನು ತಮ್ಮ ಸ್ವಂತ ಹಣದಿಂದ ಭರಿಸಲು ಸಿದ್ದರಿರಬೇಕು. ನಂತರ ನಿಗಮ ಅಥವಾ ಸಂಬಂಧಿಸಿದ ಕಛೇರಿಗಳಿಗೆ ಬಿಲ್ಲನ್ನು ಸಲ್ಲಿಸುವ ಮುಖಾಂತರ ಹಣ ಮರುಪಾವತಿ ಪಡೆಯತಕ್ಕದ್ದು. ಯಾವುದೇ ವೇತನದ ಹಣವನ್ನು ಮುಂಗಡವಾಗಿ ನೀಡಲಾಗುವುದಿಲ್ಲ. ವಿಳಂಬ ಅವಧಿಗೆ ಬಡ್ಡಿ ನೀಡಲಾಗುವುದಿಲ್ಲ. ಆಯ್ಕೆಯಾದ ಗುತ್ತಿಗೆದಾರರು **ನಿಗಮದಿಂದ ಹಣ ಪಡೆದ ನಂತರ ಸಿಬ್ಬಂದಿಗೆ ವೇತನ ನೀಡುವ ಪದ್ಧತಿಯನ್ನು ಅನುಸರಿಸಬಾರದು.** ಪ್ರತಿ ತಿಂಗಳು 10ನೇ ತಾರೀಕಿನೊಳಗೆ ಹಿಂದಿನ ತಿಂಗಳಿನ ಬಿಲ್‌ನ್ನು ಎಲ್ಲಾ ದಾಖಲೆಗಳೊಂದಿಗೆ ಸಲ್ಲಿಸಬೇಕು. ಸಲ್ಲಿಸಿದ ಬಿಲ್ಲಿನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನಂತರ ಬಿಲ್‌ನ ಮೊತ್ತವನ್ನು ಪಾವತಿಸಲು ಕ್ರಮವಹಿಸಲಾಗುವುದು.

24. ನಿಗಮಕ್ಕೆ ನೀಡುವ ಸಿಬ್ಬಂದಿಗಳಿಗೆ ಅವರ ಸೇವಾ ಅವಧಿಯಲ್ಲಿ ಪ್ರಾಣಾಪಾಯ, ಆಕಸ್ಮಿಕ ಘಟನೆಗಳು ಸಂಭವಿಸಿದಲ್ಲಿ ಅದಕ್ಕೆ ಗುತ್ತಿಗೆದಾರರೇ ನೇರ ಹೊಣೆಗಾರರಾಗಿದ್ದು, ಪರಿಹಾರ ನೀಡಲು ಬದ್ಧರಾಗಿರುತ್ತಾರೆ. ನಿಗಮವು ಈ ಬಗ್ಗೆ ಯಾವುದೇ ಜವಾಬ್ದಾರಿಯನ್ನು ಹೊಂದಿರುವುದಿಲ್ಲ. ಈ ಬಗ್ಗೆ ನಿಯಮಗಳಂತೆ ಸಿಬ್ಬಂದಿಗಳಿಗೆ ಗುಂಪುವಿಮೆ/ವಿಮೆ ಮಾಡಿಸುವುದು.

25. ಸಿಬ್ಬಂದಿಯ ಕರ್ತವ್ಯಗಳನ್ನು ನಿಗದಿಪಡಿಸುವುದು, ನಿಯೋಜಿಸುವುದು ಬದಲಾಯಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

26. ನಿಯೋಜಿಸುವ ಸಿಬ್ಬಂದಿ ಪ್ರತಿ ತಿಂಗಳು ಒಂದು ದಿನ ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಒಂದು ವೇಳೆ ಒಬ್ಬ ನೌಕರನು 03 ದಿನಗಳಿಗಿಂತ ಹೆಚ್ಚು ರಜೆ ಪಡೆದ ಸಂದರ್ಭದಲ್ಲಿ ಅಥವಾ ಗೈರು ಹಾಜರಾದ ಸಂದರ್ಭದಲ್ಲಿ ಬದಲಿ ವ್ಯವಸ್ಥೆ ಮಾಡುವುದು ಏಜೆನ್ಸಿಯ ಜವಾಬ್ದಾರಿಯಾಗಿರುತ್ತದೆ.

27. ಆಯ್ಕೆಯಾದ ಏಜೆನ್ಸಿಯು ಈ ನಿಗಮಕ್ಕೆ ಭದ್ರತಾ ಸಿಬ್ಬಂದಿ ನಿಯೋಜಿಸುವ ಪೂರ್ವದಲ್ಲಿ ಅವರಿಗೆ ಪ್ರಥಮ ಚಿಕಿತ್ಸೆ ಹಾಗೂ ಅಗ್ನಿಶಾಮಕ ಸೇವೆಯ ಬಗ್ಗೆ ತರಬೇತಿ ನೀಡಿರತಕ್ಕದ್ದು ಮತ್ತು ಈ ಬಗ್ಗೆ ಅರ್ಹತಾ ಪತ್ರವನ್ನು ಹೊಂದಿರತಕ್ಕದ್ದು.

28. ಸಿಬ್ಬಂದಿಯ ಕಾರ್ಯ ವೈಖರಿ ಕುರಿತು ಪರಿಶೀಲಿಸಿ ಅವರ ಸೇವೆ ಸಮರ್ಪಕವಾಗಿದೆಯೇ ಎಂಬ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು ಮತ್ತು ಅವರ ಸೇವೆಯನ್ನು ಉತ್ತಮಪಡಿಸಿಕೊಳ್ಳುವ ಕುರಿತಾದ ಅಗತ್ಯ ಸಲಹೆ ಸೂಚನೆಗಳನ್ನು ಕಾಲಕಾಲಕ್ಕೆ ನೀಡುವುದು. ಅಲ್ಲದೇ ನಿಗಮದ ಅಧಿಕಾರಿಗಳು ನೀಡುವ ಸೂಚನೆಗಳನ್ನು ಪಾಲಿಸತಕ್ಕದ್ದು.

29. ನಿಗಮಕ್ಕೆ ಒದಗಿಸುವ ಸಿಬ್ಬಂದಿಯ ಕಾರ್ಯನಿರ್ವಹಣೆಯು ಅಸಮರ್ಪಕ ಅಥವಾ ಅತೃಪ್ತಿಕರವೆಂದು ಕಂಡುಬಂದಲ್ಲಿ ಅಂತಹ ಸಿಬ್ಬಂದಿಯನ್ನು ಈ ಕಛೇರಿಯಿಂದ ತಿಳಿಸಿದ/ಪತ್ರ ನೀಡಿದ 24 ಗಂಟೆಯೊಳಗಾಗಿ ಬದಲಾಯಿಸತಕ್ಕದ್ದು, ತಪ್ಪಿದಲ್ಲಿ ಆ ಸಿಬ್ಬಂದಿಯ ವೇತನವನ್ನು ಪಾವತಿ ಮಾಡುವುದಿಲ್ಲ.

30. ಸಿಬ್ಬಂದಿಯು ಅವರಿಗೆ ನೇಮಿಸಲಾದ ಕರ್ತವ್ಯದ ಸ್ಥಳದಲ್ಲಿ ಸರಿಯಾಗಿ ಕರ್ತವ್ಯ ನಿರ್ವಹಿಸದೇ/ಕರ್ತವ್ಯದ ಮೇಲಿರದೇ ಇದ್ದಲ್ಲಿ ಅವರ ಆ ದಿನದ ವೇತನವನ್ನು ಯಾವುದೇ ಸೂಚನೆ ನೀಡದೆ ಕಡಿತಗೊಳಿಸಲಾಗುವುದು.

31. ಆಯ್ಕೆಯಾದ ಗುತ್ತಿಗೆದಾರರು ರೂ.200/-ಗಳ ಛಾಪಾ ಕಾಗದದಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ (ಕೆ.ಎಸ್.ಎಸ್.ಐ.ಡಿ.ಸಿ.) ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು ಹಾಗೂ ನಿಗಮದ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕಾರ್ಯನಿರ್ವಹಿಸತಕ್ಕದ್ದು ಕರಾರು ಒಪ್ಪಂದ ಮಾಡಿಕೊಳ್ಳದೇ ಇದ್ದಲ್ಲಿ ಅವರನ್ನು / ಆ ಸಂಸ್ಥೆಯನ್ನು ತಿರಸ್ಕರಿಸಿ, ಇದರಿಂದ ಉಂಟಾಗುವ ನಷ್ಟವನ್ನು ಅವರಿಂದಲೇ / ಆ ಸಂಸ್ಥೆಯಿಂದಲೇ ವಸೂಲಿ ಮಾಡಲಾಗುವುದು ಹಾಗೂ ಟೆಂಡರ್‌ದಾರರ ಇ.ಎಂ.ಡಿ ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

32. ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ಸರ್ಕಾರದ ಮತ್ತು ಸಾರ್ವಜನಿಕ ಸ್ವಾಮ್ಯಕ್ಕೆ ಸೇರಿದ ಉದ್ದಿಮೆಗಳಿಂದ ಈ ವಿಷಯದಲ್ಲಿ ಸರಬರಾಜು ಆದೇಶ ಪಡೆದು ಅತೃಪ್ತಿಕರ ಸೇವೆಯ ಕಾರಣದಿಂದ ರದ್ದುಗೊಳಿಸಿದ್ದಲ್ಲಿ ಅಂತಹ ಗುತ್ತಿಗೆದಾರರು / ಸಂಸ್ಥೆಯು ಟೆಂಡರ್ ಸಲ್ಲಿಸಲು ಅರ್ಹರಿರುವುದಿಲ್ಲ.

33. ಒಂದು ವೇಳೆ ಈ ಹಿಂದಿನ ವರ್ಷಗಳಲ್ಲಿ ಆಯ್ಕೆಯಾದ ಗುತ್ತಿಗೆದಾರರು / ಸಂಸ್ಥೆಯವರು ದರಗಳನ್ನು ಒಪ್ಪಿ ಆದೇಶವನ್ನು ಪಡೆದು ಸಿಬ್ಬಂದಿ ಒದಗಿಸದಿದ್ದಲ್ಲಿ ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ. ಅಂತಹ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

34. ಭದ್ರತಾ ಸಿಬ್ಬಂದಿಯು ಅವರಿಗೆ ನೀಡಿರುವ ಸಮವಸ್ತ್ರ ಧರಿಸಿ ಈ ನಿಗಮದ ಕಛೇರಿಗೆ ಪ್ರತಿ ದಿನ ನಿಗದಿತ ವೇಳೆಯಲ್ಲಿ ಹಾಜರಾಗತಕ್ಕದ್ದು. ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸುವ ಭದ್ರತಾ ಸಿಬ್ಬಂದಿಗಳಿಗೆ ಟಾರ್ಚ್, ಸೀಟಿ, ಲಾಠಿ, ರೈನ್‌ಕೋಟ್ ಇತ್ಯಾದಿ ಸುರಕ್ಷತಾ ಸಾಧನಗಳನ್ನು ನಿಯಮಗಳಂತೆ ಭರಿಸತಕ್ಕದ್ದು.

35. ಈ ಒಡಂಬಡಿಕೆಯಲ್ಲಿ ಯಾವುದೇ ತಕರಾರುಗಳು ಅಥವಾ ಒಡಂಬಡಿಕೆಯ ನಂತರದಲ್ಲಿ ಉದ್ಭವಿಸಬಹುದಾದ ತಕರಾರುಗಳನ್ನು ಪರಸ್ಪರ ಸಂಧಾನದ ಮುಖಾಂತರ ಪ್ರಥಮ ಹಂತದಲ್ಲಿ ಬಗೆಹರಿಸಿಕೊಳ್ಳುವುದು. ತಪ್ಪಿದಲ್ಲಿ ತಕರಾರು ಬಗೆಹರಣೆಯು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿರುತ್ತದೆ. ತಕರಾರುಗಳು ಇತ್ಯರ್ಥವಾಗುವವರೆಗೆ ಸಿಬ್ಬಂದಿಯನ್ನು ಒದಗಿಸುವ ಸಂಸ್ಥೆಗೆ ಹಣ ಪಾವತಿಸುವುದನ್ನು ತಡೆಹಿಡಿಯಲಾಗುತ್ತದೆ.

36. ಗುತ್ತಿಗೆದಾರರು ಕನಿಷ್ಠ 2 ತಿಂಗಳ ಅವಧಿಯಲ್ಲಿ ನಿಗಮಕ್ಕೆ ಒದಗಿಸುವ ಎಲ್ಲಾ ಸಿಬ್ಬಂದಿಗಳ ಇ.ಎಸ್.ಐ. ಮತ್ತು ಇ.ಪಿ.ಎಫ್. ಖಾತೆಗಳನ್ನು ತೆರೆಯಬೇಕು. ಒಂದು ವೇಳೆ ಖಾತೆ ತೆರೆಯದಿದ್ದಲ್ಲಿ ಟೆಂಡರ್ ನಿಬಂಧನೆಯ ಉಲ್ಲಂಘನೆ ಎಂದು ಪರಿಗಣಿಸಿ ಗುತ್ತಿಗೆಯನ್ನು ರದ್ದು ಮಾಡಲಾಗುವುದು. ಈ ಖಾತೆ ತೆರೆಯುವವರೆಗಿನ ಅವಧಿಯಲ್ಲಿ ಸಿಬ್ಬಂದಿಯ ವಂತಿಕೆಗಳನ್ನು ಕಟಾವು ಮಾಡಬಾರದು ಈ ಹಣವನ್ನು ಸಿಬ್ಬಂದಿಯ ವೇತನದಲ್ಲಿ ಸೇರಿಸಿ ಅವರಿಗೆ ನೀಡಬೇಕು.

37. ಪ್ರತಿಯೊಬ್ಬ ಸಿಬ್ಬಂದಿಗೆ ನಿಯಮಾನುಸಾರ ನೀಡಬೇಕಾದ ಇ.ಎಸ್.ಐ., ಇ.ಪಿ.ಎಫ್. ಮತ್ತು ವೃತ್ತಿತೆರಿಗೆ ಇತ್ಯಾದಿ ಶಾಸನಬದ್ಧ ವಂತಿಕೆಗಳನ್ನು ಸಂಬಂಧಿಸಿದ ಪ್ರಾಧಿಕಾರಗಳಿಗೆ ಪಾವತಿಸಬೇಕು. ಪಾವತಿಸಿದ ಬಗ್ಗೆ ಸಿಬ್ಬಂದಿಗೆ ಮಾಹಿತಿ ನೀಡಬೇಕು.

38. ಪ್ರತಿಯೊಬ್ಬ ಸಿಬ್ಬಂದಿಗೆ ನೀಡುವ ವೇತನ, ವಿವಿಧ ವಂತಿಕೆಗಳ ಕಡಿತಗಳನ್ನು ಮಾಡಿದ ಬಗ್ಗೆ ನೌಕರನಿಗೆ ಪ್ರತಿ 3 ತಿಂಗಳಿಗೊಮ್ಮೆ ಸಂಬಂಧಪಟ್ಟ ಇಲಾಖೆಗಳಿಂದ ಸ್ಟೇಟ್‌ಮೆಂಟ್ / ತಃಖ್ತೆ ಪಡೆದು ನೌಕರರಿಗೆ ನೀಡುವುದು.

39. ಈ ಒಪ್ಪಂದವನ್ನು ರದ್ದುಪಡಿಸಲು ಇಚ್ಛಿಸಿದಲ್ಲಿ, ಕರಾರು ರದ್ದುಪಡಿಸ ಬಯಸುವವರು ಒಂದು ತಿಂಗಳ ಮುಂಚಿತವಾಗಿ ತಿಳುವಳಿಕೆ ನೋಟಿಸ್‌ನ್ನು ನೀಡತಕ್ಕದ್ದು. ಏಜೆನ್ಸಿಯ ಕಾರ್ಯದಕ್ಷತೆಯು ಚೆನ್ನಾಗಿದ್ದು ಅವಶ್ಯಕವೆನಿಸಿದಲ್ಲಿ ಮುಂದಿನ ಒಂದು ವರ್ಷದವರೆಗೆ ಗುತ್ತಿಗೆ ಅವಧಿಯನ್ನು ವಿಸ್ತರಿಸಲಾಗುವುದು.

40. ಯಶಸ್ವಿ ಟೆಂಡರ್‌ದಾರರು ಮೇಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದಿದ್ದಲ್ಲಿ ಅವರ EMD ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದರ ಜೊತೆಗೆ, ಅವರನ್ನು ಕಪ್ಪುಪಟ್ಟಿಗೆ ಸೇರಿಸಲು ಕ್ರಮವಹಿಸಲಾಗುವುದು ಹಾಗೂ ಅವರಿಗೆ ನೀಡಿರುವ ಕಾರ್ಯಾದೇಶವನ್ನು ಕೂಡಲೇ ರದ್ದುಪಡಿಸಲಾಗುವುದು.

41. ಟೆಂಡರ್‌ನಲ್ಲಿ ನಮೂದಿಸಿರುವ ಹುದ್ದೆಗಳ ಸಂಖ್ಯೆಗಿಂತ ಹೆಚ್ಚಾಗಬಹುದು ಅಥವಾ ಕಡಿಮೆ ಆಗಬಹುದಾದ ಸಾಧ್ಯತೆಗಳಿರುತ್ತವೆ.

42. ಟೆಂಡರ್‌ನಲ್ಲಿ ನಮೂದಿಸದ ಹುದ್ದೆಗಳಿಗಿಂತ ಸಿಬ್ಬಂದಿಗಳನ್ನು ಹೆಚ್ಚಿನ ಸಿಬ್ಬಂದಿ ಅಗತ್ಯತೆಗೆ ತಕ್ಕಂತೆ ಒದಗಿಸಲು ಬದ್ಧರಾಗಿರಬೇಕು. ಅಂತಹ ಸಿಬ್ಬಂದಿಗೂ ನಿಗದಿಪಡಿಸಿರುವ ವೇತನ ಭತ್ಯೆ ಪಾವತಿ ಮಾಡಲಾಗುವುದು.

43. ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಟೆಂಡರ್ ಆಹ್ವಾನ ಪ್ರಾಧಿಕಾರ ಹೊಂದಿರುತ್ತದೆ.

44. ಯಶಸ್ವಿ ಬಿಡ್‌ದಾರರು/ಏಜೆನ್ಸಿಯವರಿಗೆ ಕೆಲಸದ ಆದೇಶ ಹೊರಡಿಸಿದ ನಂತರದಲ್ಲಿ, ವಿಫಲರಾದ ಟೆಂಡರ್‌ದಾರರಿಗೆ ಇ.ಎಂ.ಡಿ. ಹಣವನ್ನು ಮರು–ಪಾವತಿ ಮಾಡಲಾಗುವುದು.

45. ಆರಕ್ಷಕ ಪ್ರಾಧಿಕಾರಗಳಿಂದ ಕ್ರಮಬದ್ಧವಾಗಿ ಪರಿಶೀಲಿಸಲ್ಪಟ್ಟ / ದೃಢೀಕರಿಸಲ್ಪಟ್ಟ ತಮ್ಮ ಸಿಬ್ಬಂದಿಗಳ ನಡತೆ ಪ್ರಮಾಣ ಪತ್ರ ಮತ್ತು ಅನುಚರಗಳನ್ನು ಏಜೆನ್ಸಿಯವರು ಒದಗಿಸಬೇಕು.

46. ಕರ್ನಾಟಕದಾದ್ಯಂತ ಸೆಕ್ಯುರಿಟಿ ಏಜೆನ್ಸಿ ವ್ಯವಹಾರವನ್ನು ನಡೆಸಲು ಟೆಂಡರ್‌ದಾರರು ಪೊಲೀಸ್ ಇಲಾಖೆಯಿಂದ ಪರವಾನಗಿಯನ್ನು ಪಡೆದಿರುವವರು ಮತ್ತು ಕಾರ್ಮಿಕ ಇಲಾಖೆಯಿಂದ ಲೈಸೆನ್ಸ್ ಪಡೆದಿರುವವರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಈ ಕುರಿತು ದಸ್ತಾವೇಜು ಪ್ರಮಾಣಾಧಿಕಾರಿಯವರ ಪರವಾನಗಿ ಪತ್ರಗಳನ್ನು ಅಪ್‌ಲೋಡ್ ಮಾಡತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಮೇಲಿನ ಷರತ್ತು ಮತ್ತು
ನಿಬಂಧನೆಗಳನ್ನು ಒಪ್ಪಿರುತ್ತೇನೆ.

ಟೆಂಡರ್‌ದಾರರ ಸಹಿ / ಮೊಹರು

ಕರಾಸಕೈಅನಿನಿ

## ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು– 560 010.

## ಭಾಗ–ಇ

## ಟೆಂಡರ್‌ಗಳನ್ನು ಸಲ್ಲಿಸಬೇಕಾದ ವಿಧಾನ

## ಮೊದಲನೇ ತಾಂತ್ರಿಕ ಬಿಡ್‌ನಲ್ಲಿ ಇರಬೇಕಾದ ಮಾಹಿತಿ

1. ಟೆಂಡರ್‌ದಾರರು 2021–22, 2022–23 ಮತ್ತು 2023–24ನೇ ಸಾಲಿನ ಮೂರು ವರ್ಷಗಳಲ್ಲಿ ಯಾವುದಾದರೂ ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರಿತ ಸಿಬ್ಬಂದಿ ಸೇವೆ ಒದಗಿಸಿದ ಬಗ್ಗೆ ಪಡೆಯಲಾದ ಪ್ರಮಾಣ ಪತ್ರದ ದೃಢೀಕೃತ ಪ್ರತಿಗಳನ್ನು ಲಗತ್ತಿಸತಕ್ಕದ್ದು. ಒಂದು ವೇಳೆ ಸದರಿ ಪ್ರಮಾಣ ಪತ್ರದ ದೃಢೀಕೃತ ಪ್ರತಿಗಳನ್ನು ಸಲ್ಲಿಸದಿದ್ದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

2. ಟೆಂಡರ್‌ದಾರರು ಹೊಂದಿರುವ ಜಿಎಸ್‌ಟಿ ಇನ್ ತೆರಿಗೆ, ಪ್ಯಾನ್ (PAN) ಇ.ಎಸ್.ಐ ಮತ್ತು ಇ.ಪಿ.ಎಫ್ ನೊಂದಣಿ ಸಂಖ್ಯೆಗಳ ಹಾಗೂ ಆದಾಯ ತೆರಿಗೆ ಪ್ರಮಾಣ ಪತ್ರಗಳ ಪ್ರತಿಗಳನ್ನು ಲಗತ್ತಿಸತಕ್ಕದ್ದು.

3. ಬ್ಯಾಂಕಿನಲ್ಲಿ 2021–22, 2022–23 ಮತ್ತು 2023–24ನೇ ಸಾಲಿನವರೆಗೆ ಪ್ರತಿ ಸಾಲಿನಲ್ಲಿ ಕನಿಷ್ಟ 50.00 ಲಕ್ಷಗಳ ಬ್ಯಾಂಕ್ ವಹಿವಾಟು ನಡೆಸಿದ ವಿವರಗಳ ಬಗ್ಗೆ ಜಮಾ, ಖರ್ಚಿನ ಪಟ್ಟಿಯನ್ನು ಬ್ಯಾಂಕ್ ಪಾಸ್ ಪುಸ್ತಕದ ಆಧಾರದ ಮೇಲೆ ಚಾರ್ಟೆಡ್ ಅಕೌಂಟೆಂಟ್ ರವರು ತಯಾರಿಸಿ ಸಲ್ಲಿಸಿದ ಆಡಿಟ್ ಪ್ರತಿಗಳೊಂದಿಗೆ ಸಲ್ಲಿಸತಕ್ಕದ್ದು ಹಾಗೂ ಬ್ಯಾಂಕ್ ವ್ಯವಸ್ಥಾಪಕರಿಂದ ಪ್ರತಿ ವರ್ಷ ನಡೆಸಿದ ಆರ್ಥಿಕ ವಹಿವಾಟುಗಳ ಧೃಡೀಕರಣ ಪತ್ರವನ್ನು ವರ್ಷವಾರು ಒಂದೇ ಶೀಟ್‌ನಲ್ಲಿ ಸಲ್ಲಿಸತಕ್ಕದ್ದು.

4. ಪ್ರತಿ ಸಿಬ್ಬಂದಿಗೆ ಕಾರ್ಮಿಕ ಕಾಯಿದೆಯನ್ವಯ, ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯಗಳ ನೊಂದಣಿ ಪ್ರಮಾಣ ಪತ್ರಗಳ ಪ್ರತಿಗಳನ್ನು ಸಲ್ಲಿಸತಕ್ಕದ್ದು.

5. ಕರ್ನಾಟಕದಾದ್ಯಂತ ಪ್ರತ್ಯೇಕ ಏಜೆನ್ಸಿ ವ್ಯವಹಾರವನ್ನು ನಡೆಸಲು ಟೆಂಡರ್‌ದಾರರು ಆರಕ್ಷಕ ಇಲಾಖೆಯಿಂದ ಪರವಾನಗಿ ಪತ್ರದ ಪ್ರತಿ ಹಾಗೂ ಕಾರ್ಮಿಕ ಇಲಾಖೆಯಿಂದ ಲೈಸೆನ್ಸ್‌ನ ಪ್ರತಿ.

6. ರೂ.3,00,000/–ಗಳ ಇ.ಎಂ.ಡಿ ಮೊತ್ತವನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವುದು.

7. ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಏಜೆನ್ಸಿಗಳಿಗೆ ಸಂಬಂಧಿಸಿರುವ ಹಣಕಾಸು ಬಿಡ್‌ನ್ನು ಮಾತ್ರ ತೆರೆಯಲಾಗುವುದು.

3

ಕರಾಸಕೈಅನಿನಿ

<u>ಆರ್ಥಿಕ ಬಿಡ್‌ನಲ್ಲಿ ಸಲ್ಲಿಸಬೇಕಾದ ಮಾಹಿತಿ: (ದರಗಳ ವಿವರ)</u>

ಆರ್ಥಿಕ ಬಿಡ್‌ನಲ್ಲಿ ಸೇವೆಯನ್ನು ಒದಗಿಸುವ ಸಂಸ್ಥೆಯು ಸೇವಾ ಶುಲ್ಕವನ್ನು ನಮೂದಿಸಬೇಕು, ಸೊನ್ನೆ(ಶೂನ್ಯ) ದರವನ್ನು ನಮೂದಿಸಿದ ಟೆಂಡರನ್ನು ತಿರಸ್ಕರಿಸಲಾಗುವುದು.

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ
ಅಭಿವೃದ್ಧಿ ನಿಗಮ ನಿಯಮಿತ,
ಬೆಂಗಳೂರು.

ಒಪ್ಪಿದೆ:

ಟೆಂಡರ್‌ದಾರರ ಹೆಸರು, ಸಹಿ/ಮೊಹರು

(2)

ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು– 560 010.

ಸಂಖ್ಯೆ: ಕರಾಸಕೈಅನಿನಿ/ಸಿಬ್ಬಂದಿ/ಗುತ್ತಿಗೆ/2024–26 |736 ದಿನಾಂಕ: 2 AUG 2024

**ವಿವಿಧ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲ ಆಧಾರದ ಮೇಲೆ ನೀಡುವ ಬಗ್ಗೆ.**

1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ (ಕೆ.ಎಸ್.ಎಸ್.ಐ.ಡಿ.ಸಿ.) ಕಛೇರಿಯ ವಿವಿಧ ಸ್ಥಳಗಳಿಗೆ ಈ ಕೆಳಕಂಡ ಸಿಬ್ಬಂದಿ ಸೇವೆಯನ್ನು ಹೊರಸಂಪನ್ಮೂಲ ಆಧಾರದ ಮೇಲೆ ಪಡೆಯುವ ಬಗ್ಗೆ ವಿವರಗಳು:

| ಕ್ರ.ಸಂ | ಸಿಬ್ಬಂದಿ | ಸಿಬ್ಬಂದಿ ಸಂಖ್ಯೆ | ಪ್ರತಿಯೊಬ್ಬರ ಮಾಸಿಕ ವೇತನ (ರೂ. ಗಳಲ್ಲಿ) | ಒಟ್ಟು ವೇತನ (ರೂ. ಗಳಲ್ಲಿ) |
|---|---|---|---|---|
| 1 | ಡಾಟಾ ಎಂಟ್ರಿ ಆಪರೇಟರ್ | 29 | 20,404/– | 5,91,716/– |
| 2 | ಚಾಲಕರು | 15 | 20,404/– | 3,06,060/– |
| 3 | ಸೆಕ್ಯೂರಿಟಿ ಗಾರ್ಡ್ | 30 | 20,404/– | 6,12,120/– |
| 4 | ಗ್ರೂಪ್ ಡಿ ನೌಕರರು | 26 | 19,509/– | 5,07,234/– |
| | ಒಟ್ಟು | **100** | – | **20,17,130/–** |

2. ಕಾರ್ಮಿಕ ಇಲಾಖೆಯಿಂದ ಕಾಲಕಾಲಕ್ಕೆ ನಿಗದಿಪಡಿಸುವ ಮಾಸಿಕ ವೇತನದಂತೆ ಪಾವತಿಗೆ ಪರಿಗಣಿಸಲಾಗುವುದು. ಅಗತ್ಯವಿರುವ ಸಿಬ್ಬಂದಿಗಳ ಸಂಖ್ಯೆ ಸಕ್ಷಮ ಪ್ರಾಧಿಕಾರದ ನಿರ್ದೇಶನದ ಬದಲಾವಣೆಗೆ ಒಳಪಟ್ಟಿದೆ.

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ
ಅಭಿವೃದ್ಧಿ ನಿಗಮ ನಿಯಮಿತ,
ಬೆಂಗಳೂರು.

(1)

## ಹೊರ ಸಂಪನ್ಮೂಲ ಆಧಾರಿತ ಸೇವೆ ಒದಗಿಸುವ ಸಂಸ್ಥೆಯು ಪೂರೈಸುವ ಸಿಬ್ಬಂದಿಗಳ ವಿದ್ಯಾರ್ಹತೆಯು ಈ ಕೆಳಕಂಡಂತೆ ಇರತಕ್ಕದ್ದು.

| ಕ್ರಸಂ | ಹುದ್ದೆಯ ವಿವರ | ವಿದ್ಯಾರ್ಹತೆ ಮತ್ತು ಅನುಭವ |
|---|---|---|
| 1. | ಡಾಟಾ ಎಂಟ್ರಿ ಆಪರೇಟರ್ | • ಪಿಯುಸಿ ತೇರ್ಗಡೆಯಾಗಿರಬೇಕು.<br>• ಕಿಯೋನಿಕ್ಸ್ ಅಥವಾ ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆಗಳು ನಡೆಸುವ ಕಂಪ್ಯೂಟರ್ ಕೋರ್ಸ್ ಪ್ರಮಾಣ ಪತ್ರಗಳನ್ನು ಹೊಂದಿರಬೇಕು.<br>• ಕನ್ನಡ & ಇಂಗ್ಲೀಷ್ ಟೈಪಿಂಗ್, Basic, Tally, DTP, Excel, Internet ಬಳಕೆಯ ಜ್ಞಾನ ಹೊಂದಿರಬೇಕು.<br>• ಕನಿಷ್ಠ 2 ರಿಂದ 3 ವರ್ಷಗಳ ಅನುಭವವಿರಬೇಕು. |
| 2. | ಚಾಲಕರು | • ಎಸ್.ಎಸ್.ಎಲ್.ಸಿ. ಪಾಸ್.<br>• ಡಿಎಲ್ ಮತ್ತು ಬ್ಯಾಡ್ಜ್ ಹೊಂದಿರಬೇಕು.<br>• ಉತ್ತಮ ಚಾಲನೆ ಮಾಡಿರುವ ಬಗ್ಗೆ ಅನುಭವ ಪತ್ರ ಹೊಂದಿರಬೇಕು. |
| 3. | ಭದ್ರತಾ ಸಿಬ್ಬಂದಿ / ಗ್ರೂಪ್ 'ಡಿ' ನೌಕರರು | • ಕನಿಷ್ಠ 10ನೇ ತರಗತಿ ಪಾಸ್ ಆಗಿರಬೇಕು.<br>• ಭದ್ರತಾ ಸಿಬ್ಬಂದಿ ದೈಹಿಕವಾಗಿ ದೃಢಕಾಯವಾಗಿರಬೇಕು.<br>• ವಯೋಮಿತಿ ಕನಿಷ್ಠ 20 ವರ್ಷ ಗರಿಷ್ಠ 40 ವರ್ಷದಲ್ಲಿರಬೇಕು<br>• ಕನ್ನಡ ಭಾಷೆಯನ್ನು ಓದುವ ಬರೆಯುವ ತಿಳುವಳಿಕೆ ಹೊಂದಿರಬೇಕು.<br>• ಭದ್ರತೆ ನಿರ್ವಹಣೆ ಬಗ್ಗೆ ಕನಿಷ್ಠ 3 ವರ್ಷಗಳ ಅನುಭವವಿರಬೇಕು. |

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ
ಅಭಿವೃದ್ಧಿ ನಿಗಮ ನಿಯಮಿತ,
ಬೆಂಗಳೂರು.